ಇ) ಇಲ್ಲ

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ನನ್ನ ಪ್ರಶ್ನೆಯಲ್ಲಿ ತೋಟಗಾರಿಕೆ ಸಚಿವರಿಗೆ ಉತ್ತರ ಕೊಡಲು ಕೇಳಿದರೆ.....

MR. SPEAKER : All the remaining questions will lapse by 11.15a.m., I am telling you. I am very sorry. If the Members don't co-operate I cannot proceed with the Question Hour.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ವರ್ಗಾವಣೆ ಅಲ್ಲ ತಾವು ಯೋಚಿಸಬೇಕು. ಜವಾಬ್ದಾರಿ ಸ್ಥಾನದಲ್ಲಿರುವ ಶಾಸಕರು ಒಂದು ಪ್ರಶ್ನೆ ಕೇಳಿದರೆ ಅದನ್ನು ತೋಟಗಾರಿಕೆ ಸಚಿವರಿಗೆ ಕಳಿಸಿದರೆ ಅದಕ್ಕೆ ಉತ್ತರ ಕೊಟ್ಟವರು ಎಂಥವರು? ಕಂಬಳಿಹುಳ ಎಲ್ಲಾದರೂ ತೆಂಗಿಗೆ ಬೀಳುತ್ತದೆಯೇ ಇದನ್ನು ಯೋಚಿಸಬೇಕೋ ಬೇಡವೋ?

11.10 ಎ.ಎಂ.

ಅಧ್ಯಕ್ಷರು : ತಾವೇ ಟೈಪ್ ಮಾಡಿಸಿಕೊಟ್ಟಿದ್ದೀರಿ. ತಾವೇ ನೋಡಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಇದು ತೋಟಗಾರಿಕೆ ಸಚಿವರಿಗೆ ಬರುವುದಿಲ್ಲ ಎಂದು ಹೇಳಿ ಅವರು ಉತ್ತರ ಬರೆಯಬಹುದಾಗಿತ್ತಲ್ಲ.

ಅಧ್ಯಕ್ಷರು : ತಾವೇ ಟೈಪ್ ಮಾಡಿಸಿಕೊಟ್ಟಮೇಲೆ ಮತ್ಯಾಕೆ ಅದರ ಬಗ್ಗೆ ಚರ್ಚೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಪ್ರಿಂಟಿಂಗ್ ತಪ್ಪಾಗಿರಬಹುದು. ಅಧಿಕಾರಿಯಾದಂಥವರು ಇದಕ್ಕೆ ಹೇಗೆ ಉತ್ತರ ಕೊಟ್ಟರು?

ಅಧ್ಯಕ್ಷರು : ಆಯಿತು, ತಾವು ಅದರ ಬಗ್ಗೆ ನಮ್ಮ ಕಛೇರಿಗೆ ಬನ್ನಿ; ಅದರ ಬಗ್ಗೆ ಮಾತನಾಡೋಣ ಮತ್ತು ಅದನ್ನು ಸಾಲ್ವ್ ಮಾಡೋಣ.

ಪ್ರಶ್ನೆ 55 (341) ಅಧ್ಯಕ್ಷರು : ಮಾನ್ಯ ಸುರೇಶ್‌ಕುಮಾರ್‌ರವರೇ, ತಮ್ಮ ಪ್ರಶ್ನೆ ಹೋಂ ಡಿಪಾರ್ಟ್‌ಮೆಂಟ್‌ಗೆ ಟ್ರಾನ್ಸ್‌ಫರ್ ಆಗಿದೆ. ಪ್ರಶ್ನೆಯೇನೂ ಲ್ಯಾಪ್ಸ್ ಆಗುವುದಿಲ್ಲ. ಇನ್ನೊಂದು ದಿವಸ ತೆಗೆದುಕೊಳ್ಳುತ್ತೇವೆ.

ರಾಜ್ಯದಲ್ಲಿ ಅಕ್ರಮ ಸಕ್ರಮ ಸಮಿತಿಗಳು

56 (162) ಶ್ರೀ ಜಯಪ್ರಕಾಶ್ ಹೆಗಡೆ. ಕೆ (ಬ್ರಹ್ಮಾವರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಕ್ರಮ ಸಕ್ರಮ ಸಮಿತಿಗಳನ್ನು ರಚಿಸುವ ಕಾರ್ಯಕ್ರಮ ಪೂರ್ಣಗೊಂಡಿದೆಯೇ?

ಆ) ಪೂರ್ಣಗೊಂಡಿಲ್ಲದಿದ್ದಲ್ಲಿ ಕಾರಣಗಳೇನು? ಯಾವಾಗ ಈ ಸಮಿತಿಗಳು ರಚನಾ ಕೆಲಸವನ್ನು ಪೂರ್ಣಗೊಳಿಸಲಾಗುವುದು.

ಇ) ಹಾಗಾದಲ್ಲಿ ಆಕ್ರಮ ಸಕ್ರಮ ಸಮಿತಿಗಳ ರಚನೆಯಲ್ಲಿ ಅನುಸರಿಸಲಾಗುತ್ತಿರುವ ಮಾನದಂಡಗಳೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಬಹುಮಟ್ಟಿಗೆ ಪೂರ್ಣಗೊಂಡಿದೆ. 156 ಸಮಿತಿಗಳನ್ನು ರಚಿಸಲಾಗಿದೆ

ಆ) ಅಪೂರ್ಣ ಮಾಹಿತಿಯಿಂದಾಗಿ ವಿಳಂಬವಾಗಿದೆ. ಸಮಿತಿ ರಚನಾ ಕಾರ್ಯ ಅತಿ ಶೀಘ್ರದಲ್ಲೇ ಪೂರ್ಣಗೊಳಿಸಲಾಗುವುದು.

ಇ) ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 108-ಇ ಮತ್ತು 108-ಇಇ ಅನ್ಯಯ ಸಮಿತಿಗಳನ್ನು ರಚಿಸಲಾಗುತ್ತಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಿದ್ದಾರೆ. ಅದರಲ್ಲಿ ಮಾನ್ಯ ಸಚಿವರು 'ಅಪೂರ್ಣ ಮಾಹಿತಿಯಿಂದಾಗಿ ವಿಳಂಬವಾಗಿದೆ' ಎಂದು ಹೇಳಿ ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಒಂದು ಇನ್‌ಫರ್ಮೇಷನ್ ಪ್ರಕಾರ ನಮ್ಮ ಭಾಗದಿಂದ ಅಧಿಕಾರಿಗಳು ಎಲ್ಲಾ ಮಾಹಿತಿಯನ್ನು ಕೊಟ್ಟಿದ್ದಾರೆ ಮತ್ತು ಮಾನ್ಯ ಸಚಿವರು ಕೇಳಿದ ಒಂದು ಪತ್ರಕ್ಕೆ ನಾವು ಕೂಡ ಉತ್ತರವನ್ನು ಬರೆದಿದ್ದೇವೆ. ಅದನ್ನು ಯಾವಾಗ ಮಾಡುತ್ತಾರೆಂದು ಮಾನ್ಯ ಸಚಿವರು ಉತ್ತರವನ್ನು ಹೇಳಬೇಕು.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ಇದಕ್ಕಾಗಿ ಒಂದು ದಿವಸವನ್ನು ಗೊತ್ತುಮಾಡಿ ಸಂಬಂಧಪಟ್ಟ ನಮ್ಮ ಮಾನ್ಯ ಸದಸ್ಯರ ಜೊತೆಯಲ್ಲಿ ಸಮಾಲೋಚನೆ ಮಾಡಿ ಇದನ್ನು ತೀರ್ಮಾನ ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಪ್ರಭಾಕರ ಬಂಗೇರ : ಮಾನ್ಯ ಅಧ್ಯಕ್ಷರೇ, ನಮ್ಮ ಕ್ಷೇತ್ರದಲ್ಲೂ ಕೂಡ ಈ ಸಮಸ್ಯೆ ಇದೆ. ಬೆಳ್ತಂಗಡಿ ತಾಲ್ಲೂಕಿನಲ್ಲೂ ಕೂಡ ಅದೇ ಸಮಸ್ಯೆ ಇದೆ. ಅದನ್ನು ಕೂಡ ಸಮಾಲೋಚನೆ ಮಾಡಿ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ಸಂಬಂಧಪಟ್ಟವರು ಎಂದರೆ ಎಲ್ಲಾ ಸೇರಿ ಆಯಿತು. ನೀವು ಸಂಬಂಧಪಟ್ಟವರು ತಾನೇ?

ರೈತರ ಸಾಲವನ್ನು ಮನ್ನಾ ಮಾಡುವುದು

57 (355) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಈ ವರ್ಷ ವೇಳೆಗೆ ಸರಿಯಾಗಿ ಮಳೆಯಾಗದೇ ಇರುವುದರಿಂದ ಮತ್ತು ಕೆಲವು ಕಡೆಗೆ ಅತೀವೃಷ್ಟಿಯಿಂದ ಹಾಗೂ ರೈತನು ಬೆಳೆದ ಬೆಳೆಗಳ ಬೆಲೆಗಳು ಸಾಕಷ್ಟು ಪ್ರಮಾಣದಲ್ಲಿ ಕುಸಿದಿದ್ದರಿಂದ ರೈತರು ಸಂಕಷ್ಟದಲ್ಲಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಗ್ರಾಮೀಣ ವ್ಯವಸಾಯ ಸಹಕಾರಿ ಸಂಘದಲ್ಲಿ ಹಾಗೂ ಭೂ ಅಭಿವೃದ್ಧಿ ಬ್ಯಾಂಕ್‌ನಲ್ಲಿ ರೈತರು ಮಾಡಿದ ಸಾಲವನ್ನು ಮನ್ನಾಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?